# ಶ್ರದ್ಧೆ

ಇದು ಉಪನಿಷತ್ತಿನಲ್ಲಿ ಹೇಳಿದ ಕಥೆ. ವಾಜಶ್ರವಸನೆಂಬ ದೊಡ್ಡ ಮನುಷ್ಯನೊಬ್ಬನಿದ್ದ. ದೊಡ್ಡ ಯಜ್ಞ–ಯಾಗಗಳನ್ನು ಮಾಡುವುದರಲ್ಲಿ ಮಾಡಿಸುವುದರಲ್ಲಿ ಪಾರಂಗತನಿದ್ದು ಹೆಸರಾಗಿದ್ದ. ಕರ್ಮಕಾಂಡದಲ್ಲಿ ನಿಷ್ಠ. ಒಮ್ಮೆ ದೊಡ್ಡ ಯಜ್ಞವೊಂದನ್ನು ತನಗಾಗಿಯೇ ಏರ್ಪಡಿಸಿದ. ನಾವು ತೀರ ಸಹಜವಾಗಿ– 'ಯಜಮಾನ' ಎಂಬ ಪದವನ್ನು ಬಳಸುತ್ತೇವಲ್ಲ– ಅದು ಯಜ್ಞವನ್ನು ಮಾಡುವವನು, ಮಾಡಿಸುವವನು, ಯಜ್ಞದ ಸಂಕಲ್ಪವನ್ನು ಮಾಡಿದವನು ಎಂಬರ್ಥದ ಪದ. ಅಂದರೆ ಕರ್ಮಕಾಂಡ ಸಂಬಂಧಿಯಾದ ಪದ. ಆದರೆ, ನಾವು ಕರ್ಮವನ್ನು ಮಾಡುವವರಾಗಿ ನಮ್ಮ ಕರ್ಮದ ಯಜಮಾನರು ನಾವೇ ಎಂದು ಭಾವಿಸಿದೆವಾದರೆ– ಹಾಗೆ ಭಾವಿಸುವುದು ನಮಗೆ ಇಷ್ಟವೇ ಆದರೂ– ಇದು ಪೂರ್ಣ ಸತ್ಯವಾಗಿರಲಾರದು. ಏಕೆಂದರೆ 'ಕರ್ಮ'ಕ್ಕೊಂದು 'ಫಲ' ಇದೆ. 'ಫಲ'ದ ಅಪೇಕ್ಷೆಯಿಂದಾಗಿಯೇ ನಾವು ಕರ್ಮವನ್ನು ಮಾಡುವವರಾಗಿದ್ದೇವೆ. 'ಫಲ'ವಾದರೋ ನಿಸರ್ಗಾಯತ್ತ ಅಂದರೆ ನಾವು 'ಕರ್ಮವನ್ನು ಮಾಡಬಲ್ಲೆವಲ್ಲದೆ 'ಫಲ'ವನ್ನು ಉಂಟುಮಾಡುವುದು ನಿಸರ್ಗದ ಕೈಯಲ್ಲಿದೆ. ನಿಸರ್ಗವು ಸರಿಯಾಗಿ ಸ್ಪಂದಿಸದಿದ್ದರೆ ಫಲವು ಉಂಟಾಗಲಾರದು. ಮಳೆ ಬಾರದಿದ್ದರೆ 'ಬೆಳೆ' ಎಂಬ ಫಲವು ಉಂಟಾಗುವುದೇ? ಇದು ಎಲ್ಲರ ಅನುಭವ. ಹೀಗಿರಲಾಗಿ 'ಫಲ'ವನ್ನುಂಟು ಮಾಡುವ ನಿಸರ್ಗವನ್ನೇ ಯಜಮಾನ ಎಂದೇಕೆ ಹೇಳಬಾರದು? ಅಲ್ಲದೆ ನಾವು ಏನೇ ಕರ್ಮಗಳನ್ನು ಮಾಡುವುದಾದರೂ, ಅವೆಲ್ಲವನ್ನೂ ನಾವು ನಿಸರ್ಗವನ್ನೇ ನೋಡಿ ಕಲಿತದ್ದಾಗಿರುವುದರಿಂದ, ಅಂದರೆ ಕರ್ಮ ಮಾಡುವ ಪ್ರೇರಣೆ ನಮಗೆ ನಿಸರ್ಗದಿಂದಲೇ ಬಂದಿದ್ದರಿಂದ ನಮ್ಮ ಕರ್ಮಕ್ಕೆ ನಾವೇ ಯಜಮಾನರು ಎಂದು ಭಾವಿಸುವುದು ಎಷ್ಟು ಸರಿ?

ಈ ಬಗೆಯ ಚಿಂತನೆಗಳು ನಮ್ಮನ್ನು ಕರ್ಮಕಾಂಡದ ಜಾಡಿನಿಂದ ಎತ್ತರಿಸಿ ಅರಿವಿನ ಕಡೆಗೆ ಒಯ್ಯಬಲ್ಲವು. ಉಪನಿಷತ್ತು ಅರಿವಿನ ದಾರಿಯಾಗಿದೆ.

ಈಗ ಕಥೆಗೆ ಹಿಂದಿರುಗೋಣ.

ವಾಜಶ್ರವಸನು ಏರ್ಪಡಿಸಿದ್ದ ಯಜ್ಞದಲ್ಲಿ ಮುಖ್ಯವಾದ ನಿಯಮ ಒಂದಿತ್ತು. ಅದೆಂದರೆ ತನ್ನದ್ದಾದ ಎಲ್ಲ ಸಂಪತ್ತನ್ನೂ ಈ ಯಜ್ಞ ದೀಕ್ಷಿತನು ಯೋಗ್ಯರಿಗೆ ದಾನ ನೀಡಬೇಕಿತ್ತು. ತನ್ನದ್ದಾಗಿ ಏನನ್ನೂ ಉಳಿಸಿಕೊಳ್ಳಬಾರದಾಗಿತ್ತು. ಇದು ಉದಾತ್ತವಾದ ಉದ್ದೇಶವಾಗಿದೆ ಎನ್ನುವುದು ನಿಜ. ಆದರೆ ದಾನ ನೀಡುವಾಗ, ದಾನ ಯೋಗ್ಯವಾದ ವಸ್ತುಗಳನ್ನು ಮಾತ್ರ ನೀಡಬೇಕೆಂಬುದು ಕೂಡಾ ನಿಯಮವೆ. ಅಂದರೆ, ದಾನವನ್ನು ಸ್ವೀಕರಿಸಿದವರಿಗೆ ಅದರಿಂದ ಲೌಕಿಕವಾದ ಪ್ರಯೋಜನವಾಗಬೇಕು. ಅದೊಂದು 'ಹೊರೆ' ಆಗಬಾರದು. ಅಲ್ಲದೆ, ದಾನವನ್ನು ನೀಡುವವರಿಗೆ, ಹಾಗೆ ನೀಡಿದುದರಿಂದ, ತಮ್ಮ 'ಹೊರೆ' ಕಡಿಮೆಯಾಯಿತು ಎನ್ನುವ 'ಲಾಭ' ಉಂಟಾಗಬಾರದು. ಅಂದರೆ, ದಾನ ನೀಡಿದುದರಿಂದ ಲೌಕಿಕವಾಗಿ ತಾವೇ ತಮಗೆ ಉಪಕಾರ ಮಾಡಿಕೊಂಡಂತೆ ಎಂಬ ಪರಿಸ್ಥಿತಿ ಕಿಂಚಿತ್ತು ಉಂಟಾಗಬಾರದು. ಇದು ನಿಯಮ.

ಇವೆಲ್ಲವೂ ತಿಳಿದಿದ್ದರೂ, ವಾಜಶ್ರವಸನು ತಾನು ಹಮ್ಮಿಕೊಂಡ ಯಜ್ಞದಲ್ಲಿ ತನ್ನ ಸಂಪತ್ತಾದ ಗೋವುಗಳನ್ನು– ಆ ಕಾಲದ ಸಂಪತ್ತೆಂದರೆ ಗೋವುಗಳೇ ಅಲ್ಲವೆ? ದಾನ ನೀಡುತ್ತಿರುವಾಗ– ತನಗೆ 'ಹೊರೆ'ಯಾದಂತಿರುವ ಮುದಿ ಹಸುಗಳನ್ನು, ಹಿಂಡಿದರೆ ಹಾಲು ಕರೆಯಲಾಗದ ಬರಡು ಹಸುಗಳನ್ನು, 'ದುಗ್ಧದೋಹಾಃ ನಿರಿಂದ್ರಿಯಾಃ'– ಇಂಥ ಹಸುಗಳನ್ನು, ಸಾವಿನ ಸನಿಹದಲ್ಲಿರುವ ಹಸುಗಳನ್ನು– ದಾನ ನೀಡುತ್ತಿದ್ದನು! ಇದು ವ್ಯತ್ಕ್ರಮ. ಇದು ವಿಪರ್ಯಾಸ. ಇದು ನಿಯಮ ವಿರುದ್ಧ. ಇದು ಕುಕರ್ಮ. ಇದು ಮಾಡಬಾರದ್ದು. ಇದು ವಂಚನೆ. ಆತ್ಮ ವಂಚನೆ ಕೂಡ. ಇದರಿಂದ ಶ್ರೇಯಸ್ಸಾಗದು. ಹಾಗೆಂದು ಇದು ತಪ್ಪೆಂದು ತಿಳಿದ ಬಲ್ಲಿದರೆಲ್ಲ ಅಲ್ಲಿ ಇದ್ದರು. ಯಜ್ಞ ಕಲಾಪದಲ್ಲಿ ಪಾಲ್ಗೊಂಡವರಿಗೆಲ್ಲ ಇದು ತಿಳಿದಿತ್ತು. ದಾನವನ್ನು ಸ್ವೀಕರಿಸಿದವರಿಗೂ ಇದು ತಿಳಿದ ವಿಷಯವೇ. ವಾಜಶ್ರವಸನಿಗೇ ಇದು ತಿಳಿದಿತ್ತು. ಆದರೆ ಈ ವಿಪರ್ಯಾಸದ ಕುರಿತು ಯಾರೂ ಮಾತೆತ್ತಲಿಲ್ಲ. ಇದು ಸರಿಯಲ್ಲವೆಂಬ ಸರಳ ಸಂಗತಿಯನ್ನು– ಸತ್ಯವನ್ನು– ಯಾರೂ ಹೇಳಲಿಲ್ಲ. ಎಲ್ಲರೂ ಮೌನವಾಗಿದ್ದರು. ಮೌನವಾಗಿರುವುದೆಂದರೆ ತಪ್ಪನ್ನು 'ಸರಿ' ಎಂದು ಒಪ್ಪಿಕೊಂಡಂತೆ. ಎಂದರೆ ಈ ತಪ್ಪಿನಲ್ಲಿ ತಾವೂ ಪಾಲ್ಗೊಂಡಂತೆ. ತಾವು ತಪ್ಪು ಮಾಡದೆಯೇ ತಪ್ಪಿತಸ್ಥರಾದಂತೆ. ಈ ಅಂಶ ಕೂಡ ಯಾರಿಗೂ ತೀವ್ರವಾಗಿ ಹೊಳೆಯಲಿಲ್ಲ. ಸಹಜ ಸಂವೇದನೆ ತನ್ನ ಸೂಕ್ಷ್ಮತೆಯನ್ನು ಕಳೆದುಕೊಂಡಿತ್ತು. ದುರ್ಬಲವಾಗಿತ್ತು.

ನಮ್ಮ ಕಣ್ಣ ಮುಂದೆ ನಡೆಯುತ್ತಿರುವ ವಿಪರ್ಯಾಸಗಳಿಗೂ, ನಾವು ಸಂವೇದನಾಶೂನ್ಯರಾಗಿರುವುದಕ್ಕೂ ಪರಸ್ಪರ ಸಂಬಂಧವಿದೆ.

ಆದರೆ ನಡೆಯುತ್ತಿರುವ ಎಲ್ಲವನ್ನೂ ಹತ್ತಿರದಿಂದ, ಬಿಡುಗಣ್ಣುಗಳಿಂದ, ಸಂವೇದನೆಯಿಂದ ನೋಡುತ್ತಿದ್ದ ಹುಡುಗನೊಬ್ಬ ಅಲ್ಲೇ ಇದ್ದ. ಅವನು ನಚಿಕೇತ. ವಾಜಶ್ರವಸನ ಮಗ. ಯಾರೂ ಸೊಲ್ಲೆತ್ತದೆ ಇದ್ದಾಗ, ನಚಿಕೇತ ಈ ವಿಪರ್ಯಾಸಗಳನ್ನೆಲ್ಲ ನೋಡುತ್ತಿದ್ದಂತೆ, ನಚಿಕೇತನಲ್ಲಿ 'ಶ್ರದ್ಧೆ'ಯು ಒಳಹೊಕ್ಕಿತು—'ತಂಹ ಶ್ರದ್ಧಾ ಆವಿವೇಶ'– ಎನ್ನುತ್ತದೆ ಉಪನಿಷತ್ತು.

'ಶ್ರದ್ಧೆ' ಎಂದರೆ, ಎಲ್ಲವೂ ಯಾಂತ್ರಿಕವಾಗಿ ಜಡವಾಗಿ ನಡೆಯುತ್ತಿರುವ ಹೊತ್ತಿನಲ್ಲಿ ಆ ಜಡತೆಯನ್ನೊಡೆದು ಮೂಡುವ ಜೀವಂತಿಕೆ.

'ಶ್ರದ್ಧೆ' ಎಂದರೆ, ಯಾವುದೋ ಆಸೆಗಳಿಗೆ ಸಿಕ್ಕಿ, ದಾಕ್ಷಿಣ್ಯಗಳಿಗೆ ಒಳಗಾಗಿ, ಸತ್ಯವನ್ನು ಉಸುರಲಾಗದಿರುವ ಆತ್ಮಹೀನಾಯ ಸ್ಥಿತಿಯನ್ನು ಧಿಕ್ಕರಿಸಿ ಬಾಳುವ ಆತ್ಮವಿಶ್ವಾಸ. 'ಶ್ರದ್ಧೆ' ಎಂದರೆ ಲೌಕಿಕದ ಯಜಮಾನನು ತಪ್ಪಿ ನಡೆದಾಗ, ಆ ತಪ್ಪನ್ನು ಒಪ್ಪಿಕೊಳ್ಳದ, ಆತ್ಮದ ಯಜಮಾನಿಕೆ!

ಹೀಗೆ 'ಶ್ರದ್ಧೆ'ಯ ತನ್ನೊಳಹೊಕ್ಕಂತೆ, ನಚಿಕೇತನು, ತನ್ನ ತಂದೆಯನ್ನು ಕುರಿತು ಹೀಗೆ ಅದ್ಭುತವಾಗಿ ಕೇಳಿದನಂತೆ: 'ಕಸ್ಮೈ ಮಾಂ ದಾಸ್ಯಸಿ?' –ನನ್ನನ್ನು ಯಾರಿಗೆ ನೀಡುತ್ತಿ? ಈ ಗಹನ ಪ್ರಶ್ನೆಯನ್ನು ಮುಂದೆ ನೋಡೋಣ.

■ ತೋಷ

## ಮಾತೇ ಮುತ್ತು

★ ಮನುಕುಲಕ್ಕೆ ದೊರಕಿರುವ ಅತ್ಯಂತ ಶ್ರೇಷ್ಠ ಆಶೀರ್ವಾದವೆಂದರೆ ಹಾಸ್ಯ.
ಮಾರ್ಕ್ ಟ್ವೈನ್

★ ಎಲ್ಲ ಕೆಡುಕುಗಳಿಗೂ ವಿಜ್ಞಾನ ಔಷಧ ಕಂಡುಹಿಡಿಯಬಹುದು; ಆದರೆ ಮನುಷ್ಯನ ಪಕ್ಷಪಾತದ ರೋಗಕ್ಕೆ ಔಷಧವಿಲ್ಲ.
ಹೆಲೆನ್ ಕೆಲ್ಲರ್

★ ಹಲವು ಸೋಲುಗಳನ್ನು ನಾವು ಎದುರಿಸಬಹುದು; ಆದರೆ ಸೋಲಬಾರದು.
ಮಾಯಾ ಆ್ಯಂಜೆಲೊ

★ ಹುಟ್ಟಿನಿಂದ ಯಾವ ಮನುಷ್ಯನೂ ಶ್ರೇಷ್ಠನಲ್ಲ; ಅವನ ಕೃತಿಗಳಿಂದ ಶ್ರೇಷ್ಠ.
ಚಾಣಕ್ಯ

★ ನಮ್ಮ ಮಿತಿಗಳನ್ನು ಮೊದಲು ಒಪ್ಪಿಕೊಳ್ಳಬೇಕು, ಆಮೇಲೆ ಅದನ್ನು ದಾಟಬಹುದು.
ಆಲ್ಬರ್ಟ್ ಐನ್‌ಸ್ಟೀನ್

★ ಜೀವನದ ಅತ್ಯಂತ ಪ್ರಮುಖ ಮತ್ತು ತುರ್ತು ಪ್ರಶ್ನೆ ಏನೆಂದರೆ– ಇತರರಿಗಾಗಿ ನೀವು ಏನು ಮಾಡುತ್ತಿದ್ದೀರಿ– ಎನ್ನುವುದು.
ಮಾರ್ಟಿನ್ ಲೂಥರ್ ಕಿಂಗ್ ಜೂ.

★ ಮೊದಲು ನಿಮ್ಮ ಹೆಜ್ಜೆಯನ್ನು ಸರಿಯಾದ ಜಾಗದಲ್ಲಿ ಊರಿ. ಬಳಿಕ ದೃಢವಾಗಿ ನಿಲ್ಲಬಹುದು.
ಅಬ್ರಹಾಂ ಲಿಂಕನ್

★ ಗುಣಾತ್ಮಕ ದೃಷ್ಟಿಕೋನವಿದ್ದರೆ ಮಾತ್ರ ಗುಣಾತ್ಮಕ ಕ್ರಿಯೆಯಲ್ಲಿ ತೊಡಗಲು ಸಾಧ್ಯ.
ದಲೈ ಲಾಮ

★ ನಮ್ಮ ಸಂತೋಷ ನಮ್ಮನ್ನೇ ಅವಲಂಬಿಸಿದೆ.
ಅರಿಸ್ಟಾಟಲ್

★ ನಮ್ಮನ್ನು ನಾವೇ ರಕ್ಷಿಸಿಕೊಳ್ಳಬೇಕು; ನಮ್ಮ ದಾರಿಯನ್ನು ನಾವೇ ನಡೆಯಬೇಕು. ಬೇರೆ ಯಾರೂ ನಡೆಯಲಾಗದು.
ಗೌತಮ ಬುದ್ಧ

★ ಕ್ರಾಂತಿಯೆಂದರೆ ಹಣ್ಣಾದಾಗ ಮರದಿಂದ ಕೆಳಗೆ ಬೀಳುವ ಸೇಬಿನಂತಲ್ಲ; ನೀವೇ ಆ ಹಣ್ಣನ್ನು ಕೀಳಬೇಕು.
ಚೆ ಗವೇರ